# ತಕ್ಕಮಟ್ಟಿಗೆ ಸುಖವಾಗೇ ಇದ್ದರು

ಒಂದು ದಿನ ಚಂದಿರನೂರಿಗೆ ಹೋಗಿದ್ದೆ
ಇತ್ತ ಈ ಕವಿಗಳ ಸುಳ್ಳಲ್ಲ
ಅತ್ತ ಆ ವಿಜ್ಞಾನಿಗಳ ನಿಜವಲ್ಲ
ಆವೂರೂ ಇತ್ತು ಯಾವೂರಿನಂತೆ

ಕೆರೆ ದೊಣೆ ಹಳ್ಳ ಕೊಳ್ಳ
ಕಾಡು ಕುರುಚಲು ಗುಹೆ ಗಹ್ವರ
ಹೊಲ ಮನೆ ಅಂಗಡಿ ಮುಂಗಟ್ಟು
ಸಂತೆಮಾಳ ಸಿನಿಮಾ ಟೆಂಟು
ಬೀದಿ ಕೇರಿ ಗಲ್ಲಿ

ಪ್ರಾಣಿ ಪಕ್ಷಿ ಮತ್ತು ಜನರೂ
ಇದ್ದರು ಯಾವತ್ತಿನಂತೆ
ಜಗಳ ಪ್ರೇಮ ಕಾಮ ಹಾದರ
ಸುಳ್ಳು ಬೊಗಳೆ ಮದ ಮತ್ಸರ
ನೀತಿ ನ್ಯಾಯ ನಿಜಾಯಿತಿ
ದೊಡ್ಡ ಮನುಷ್ಯರ ಪಂಚಾಯ್ತಿ

ಅಲ್ಲಿ ಇಲ್ಲದೆ ಇದ್ದದ್ದು
ಒಂದು ಚುನಾವಣೆ
ಇನ್ನೊಂದು ದೇವರು

ಮಿಕ್ಕಿದ್ದೆಲ್ಲ ನಡೆಯುತ್ತ
ತಕ್ಕಮಟ್ಟಿಗೆ ಸುಖವಾಗಿತ್ತು
ಚರಾಚರ

ಒಂದು ವಾರದ
ಮೇಲೆ ನನ್ನ ನಿಲಗೊಡಲಿಲ್ಲ
ಕಾಯಿಲೆ ಕಣಪ್ಪ
ಎಂದರೂ ಬಿಡಲಿಲ್ಲ
ಭೂಗ್ರಹದವರನ್ನು
ಅವರು ನಂಬುವುದಿಲ್ಲ.

